# ಪಾಚಿ ಚೆಂಡಿದು 'ಕೊಕೆಡಾಮ'

■ ಸೀಮಾ ಹೆಗಡೆ

**ಅಪೂರ್ಣವಾದರೂ ಸುಂದರವಾದ 'ಕೊಕೆಡಾಮ' ಜಪಾನಿಯನ್ನರು ಜಗತ್ತಿಗೆ ಪರಿಚಯಿಸಿರುವ ಕಲೆಗಳೊಂದು. ಮನೆಗೆ ಮನಸ್ಸಿಗೆ ಹಸಿರು ಅನುಭವ ನೀಡುವ ಕೊಕೆಡಾಮದ ರಚನೆ ಬಹು ಸುಲಭ.**



ದೇಹ–ಮನಸ್ಸಿನ ಸ್ವಾಸ್ಥ್ಯ ಕಾಪಾಡುವ ಸಸ್ಯ ಪ್ರಪಂಚವನ್ನು ಒಳಾಂಗಣಕ್ಕೆ ಕರೆಸುತ್ತಿರುವುದು ನಗರಪ್ರದೇಶಗಳಲ್ಲಿನ ಜನಪ್ರಿಯ ಟ್ರೆಂಡ್. ಗಾಳಿ ಶುದ್ಧೀಕರಿಸುವ, ನೆರಳಿಗೆ ಒಗ್ಗಿಕೊಳ್ಳುವ, ಕಮ್ಮಿ ನೀರು ಬೇಡುವ, ಚಿಕ್ಕ ಜಾಗವನ್ನು ಅಲಂಕರಿಸುವ, ಗಡುಸಾಗಿ ಬೆಳೆವ ಸಸ್ಯಗಳಿಗೆ ಈಗ ಎಲ್ಲಿಲ್ಲದ ಬೇಡಿಕೆ. ಈ ಎಲ್ಲಾ ಮಾನದಂಡಗಳನ್ನು ಪೂರೈಸುವ ಕಳ್ಳಿ ಜಾತಿಯ ಗಿಡಗಳು, ಬೋನ್ಸಾಯ್, ಕಸಿ ಗಿಡಗಳಿಗೆ ಅಪಾರ ಬೇಡಿಕೆಯೂ ಇದೆ. ಹೀಗೆ ಪಟ್ಟಣವನ್ನು ಅರಣ್ಯೀಕರಿಸುತ್ತಿರುವ ತೋಟಗಾರಿಕಾ ವಿಧಾನಗಳಲ್ಲಿ ಅತ್ಯಂತ ಹಳೆಯದಾದ, ನೂತನ ಸ್ಪರ್ಶದೊಂದಿಗೆ ಜನಪ್ರಿಯವಾಗಿರುವ ಕಲೆ 'ಕೊಕೆಡಾಮ'.

ಅಕ್ಷರಶಃ ಅನುವಾದಿಸುವುದಾದರೆ 'ಕೊಕೆಡಾಮ' ಎಂದರೆ ಪಾಚಿ ಚೆಂಡು. ಪಾಚಿ ಮೆತ್ತಿದ ಮಣ್ಣಿನ ಚೆಂಡಿನಲ್ಲಿ ಗಿಡ ಬೆಳೆಸುವ ಈ ವಿಧಾನ ಹುಟ್ಟಿದ್ದು ಜಪಾನಿನಲ್ಲಿ. ಸರಳವಾಗಿ ರಚಿಸಬಹುದಾದ, ಸುಲಭವಾಗಿ ನಿರ್ವಹಿಸಬಹುದಾದ, ಆಕರ್ಷಕವಾಗಿ ಕಾಣುವ, ಶತಮಾನಗಳಷ್ಟು ಹಳೆಯದಾದ ಈ ಕುಶಲ ಕಲೆಗೆ 'ಬಡವರ ಬೋನ್ಸಾಯ್' ಎಂಬ ಖ್ಯಾತಿಯೂ ಇದೆ. ನಮ್ಮಿಷ್ಟದ ಗಿಡದ ಬೇರನ್ನು ಪೋಷಕಾಂಶ ಭರಿತ ಮಣ್ಣಿನಲ್ಲಿ ಹುದುಗಿಸಿ, ಅಂಗೈ ಅಗಲದಷ್ಟು ಗೋಲಾಕಾರಕ್ಕೆ ತಟ್ಟಿ, ಪಾಚಿಯಿಂದ ಹೊದಿಸಿದರೆ ಕೊಕೆಡಾಮ ಸಿದ್ಧ. ಕಾಲ ಕಾಲಕ್ಕೆ ನೀರು ಸಿಂಪಡಿಸುತ್ತಾ ಇದ್ದರೆ ಅಷ್ಟೇ ಸಾಕು.

## ಕೊಕೆಡಾಮದ ಪರಿಕಲ್ಪನೆ

ಜಪಾನಿನಲ್ಲಿ 'ವಾಬಿ–ಸಾಬಿ' ಎಂಬ ಕಲ್ಪನೆಯೊಂದಿದೆ. ಪ್ರಕೃತಿ ಪರಿಪೂರ್ಣವಲ್ಲ, ಆದರೆ ಪ್ರಕೃತಿಯ ಅಪೂರ್ಣತೆಯಲ್ಲಿಯೂ ಸೌಂದರ್ಯವಿದೆ. ಕಳೆಗುಂದಿ ಮಸುಕಾದರೂ, ಅಲ್ಲಲ್ಲಿ ತೂತಾದರೂ ಅಜ್ಜಿಯಿಂದ ಪಡೆದ ಸೀರೆ ಭಾವನಾತ್ಮಕವಾಗಿ ಸುಂದರ. ಬಣ್ಣಹೀನವಾಗಿ ಮರದಿಂದ ಉದುರುತ್ತಿರುವ ಹಣ್ಣೆಲೆ ಸುಂದರವಲ್ಲದಿದ್ದರೂ ಅದು ಸವೆಸಿದ ಬಾಳ ದಾರಿ ಗೌರವಯುತ. ಹೀಗೆ ಅಪೂರ್ಣವಾದ ಪ್ರಕೃತಿಯಲ್ಲಿ ಕಾಣುವ ಅಸಮ, ಸಾಧಾರಣ, ಕಡೆಗಣಿಸಲಾದ, ಸ್ವಾರಸ್ಯವಿಲ್ಲದ, ಅಶಾಶ್ವತ, ಆದರೆ ಸುಂದರವಾದ ಕ್ಷಣಗಳಿಗೆ 'ವಾಬಿ–ಸಾಬಿ' ಎಂದು ಜಪಾನಿಯನ್ನರು ಕರೆಯುತ್ತಾರೆ. ಅಪೂರ್ಣವಾದ, ಆದರೆ ಸುಂದರವಾದ ಕೊಕೆಡಾಮ ಕೂಡ ಜಪಾನಿಯನ್ನರ 'ವಾಬಿ–ಸಾಬಿ' ಜೀವನಶೈಲಿಯ ಪರಿಕಲ್ಪನೆ.



## ಕೊಕೆಡಾಮ ರಚಿಸುವ ಬಗೆ

ಒಳ್ಳೆಯ ಹವ್ಯಾಸ ಹಾಗೂ ಮನೋರಂಜಕವಾಗಿ ಕಾಣುವ ಕೊಕೆಡಾಮ ರಚನೆ ಸವಾಲಿನ ಕೆಲಸವೂ ಹೌದು. ಜನಪ್ರಿಯ ಒಳಾಂಗಣ ಸಸ್ಯಗಳಾದ ಮನೀ ಪ್ಲಾಂಟ್, ಫಿಲೊಡೆಂಡ್ರೋನ್, ಪೀಸ್ ಲಿಲ್ಲಿ, ಲಕ್ಕಿ ಬಾಂಬೂ, ವಿವಿಧ ಬಗೆಯ ಜರೀಗಿಡಗಳು (ಫರ್ನ್ಸ್) ಇವೆಲ್ಲವೂ ಕೊಕೆಡಾಮಕ್ಕೆ ಸೂಕ್ತವಾದ ಗಿಡಗಳು. ಹೂಕುಂಡಗಳಿಗೆ ಸಾಮಾನ್ಯವಾಗಿ ಉಪಯೋಗಿಸುವ ಮಣ್ಣು–ಗೊಬ್ಬರದ ಮಿಶ್ರಣವೇ ಸಮ್ಮತ.

ನಮ್ಮಿಷ್ಟದ ಗಿಡವನ್ನು ಮೊದಲು ಬೇರು ಸಮೇತ ಬೇರ್ಪಡಿಸಬೇಕು, ನಂತರ ಬೇರನ್ನು ಮೊದಲೇ ತಯಾರಿಸಿದ ಹಸಿಯಾದ ಮಣ್ಣಿನ ಮಿಶ್ರಣದೊಂದಿಗೆ ಮುಚ್ಚಬೇಕು. ಈ ಮಣ್ಣಿನ ಚೆಂಡನ್ನು ಗೋಲಾಕಾರವಾಗಿಸಿ ಹಸುರು ಪಾಚಿ/ಹಾವಸೆಯಿಂದ ಮೆತ್ತಬೇಕು. ಪಾಚಿ ಸಿಕ್ಕದಿದ್ದಲ್ಲಿ ಪೀಟ್/ತೆಂಗಿನ ನಾರಿನಿಂದಲೂ ಸುತ್ತಬಹುದು. ಹೀಗೆ ಮೆತ್ತಿದ ಪಾಚಿ ಕಳಚದಂತೆ ಸೆಣಬಿನ ದಾರದಿಂದ ಭದ್ರಪಡಿಸಿದರೆ ಕೊಕೆಡಾಮ ಪ್ರದರ್ಶನಕ್ಕೆ ಸಿದ್ಧ.

ತಯಾರಿಸಿದ ಕೊಕೆಡಾಮಗಳನ್ನು ಮೇಜಿನ ಮೇಲೆ ಕಂಟೇನರ್–ಕುಂಡಗಳಲ್ಲಿ ಇಡಬಹುದು. ಕುಂಡವಿಲ್ಲದೇ ಮನೆಯ ಛಾವಣಿಯ ಕೊಂಡಿಗೆ ನೇತು ಹಾಕಿ, ಮರದ/ಬಿದಿರಿನ ಅಂಡೆಗಳಲ್ಲಿ, ನಮ್ಮ ಕಲ್ಪನಾ ಲಹರಿಯಲ್ಲಿ ಬೇಕಾದ ಹಾಗೆ ಪ್ರದರ್ಶಿಸಬಹುದು. ಮಣ್ಣಿನ ತೇವಾಂಶಕ್ಕೆ ತಕ್ಕಂತೆ ನೀರು ಸಿಂಪಡಿಸಿದರೆ ನಮ್ಮ ಕರ್ತವ್ಯ ಸಂಪನ್ನ. ಕೊಕೆಡಾಮ ರಚಿಸುವ ಬಗ್ಗೆ ಹಲವಾರು ವಿಡಿಯೋಗಳು ಯೂಟ್ಯೂಬ್ ನಲ್ಲಿ ಲಭ್ಯವಿದೆ.

## ಹಸಿರಲ್ಲವೆ ಉಸಿರು!

ನಿಸರ್ಗದ ಅಂಶಗಳನ್ನು ಸಹಜವಾಗಿ ಒಳಗೊಂಡು ನೈಜವಾಗಿ ಕಾಣುವ 'ಕೊಕೆಡಾಮ' ಮಾನವನನ್ನು ಪ್ರಕೃತಿಗೆ ಸನಿಹವಾಗಿಸುತ್ತದೆ. ಹಸಿರು ಮತ್ತು ತಾಜಾ ಆಮ್ಲಜನಕದ ಗುರುತಾದ ಪಾಚಿ ಫಲವತ್ತತೆಯ ಪ್ರತೀಕವಾಗುತ್ತದೆ. ನಿಜವಾದ ಕಾಡನ್ನೇ ಹೋಲುವ ಮಾನವ ನಿರ್ಮಿತ ಕಾಡೊಂದು ಮನೆಯೊಳಗೇ ಸಾಕಾರವಾಗುತ್ತದೆ. ಹೀಗೆ ಹಲವಾರು ಅನುಕೂಲಗಳ ಕೊಕೆಡಾಮವನ್ನೂ ನೀವೂ ಮಾಡಿ ನೋಡಿ. ಹಸಿರನ್ನೇ ಉಸಿರಾಗಿಸಿ.

ಪ್ರತಿಕ್ರಿಯಿಸಿ: feedback@sudha.co.in